**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2019-20** **ದಿನಾಂಕ: 28-08-2019**

**ಪತ್ರಿಕಾ ಆಮಂತ್ರಣ**

**1. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 'ರಾಷ್ಟ್ರೀಯ ಕ್ರೀಡಾ ದಿನಾಚರಣೆ' ಹಾಗೂ 'ಫಿಟ್ ಇಂಡಿಯಾ' ಕಾರ್ಯಕ್ರಮಕ್ಕೆ ಚಾಲನೆ ನೀಡಲಿರುವ ಪ್ರಧಾನ ಮಂತ್ರಿಯವರ ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆ:**

**ಘನ ಉಪಸ್ಥಿತಿ:**

**ಬಿ.ಎಸ್. ಯಡಿಯೂರಪ್ಪ,**
**ಮುಖ್ಯಮಂತ್ರಿಗಳು,**
**ಕರ್ನಾಟಕ ಸರ್ಕಾರ**

**ದಿನಾಂಕ: 29-08-2019, ಗುರುವಾರ ಸಮಯ: ಬೆಳಿಗ್ಗೆ : 8.30 ರಿಂದ 11.00 ಗಂಟೆವರೆಗೆ.**

**ಸ್ಥಳ: ವಿಧಾನ ಸೌಧದ ಪೂರ್ವದ್ವಾರ, ಬೆಂಗಳೂರು.**

**2. ಕಲೆ ನೆಲೆ, ಉತ್ತರ ಕರ್ನಾಟಕದ ನೇಕಾರಿಕಾ ವೈಶಿಷ್ಟ್ಯಗಳ ಎರಡು ದಿನಗಳ ಪ್ರದರ್ಶನ**

**ಉದ್ಘಾಟನೆ : ಭಾರತಿ ಗೋವಿಂದರಾಜ್,**
**ಅಧ್ಯಕ್ಷರು,**
**ಕ್ರಾಫ್ಟ್ ಕೌನ್ಸಿಲ್ ಆಫ್ ಇಂಡಿಯಾ**

**ದಿನಾಂಕ : 29-08-2019, ಗುರುವಾರ ಸಮಯ : ಬೆಳಿಗ್ಗೆ 11-00 ಗಂಟೆಗೆ**

**ಸ್ಥಳ : ದಿ ಸಾಂಚಿ ಆರ್ಟ್ ಗ್ಯಾಲರಿ, ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್,**
**ಸಂಖ್ಯೆ : 7, ನಾಲ್ಕನೇ ಮುಖ್ಯ ರಸ್ತೆ, ಎರಡನೇ ಹಂತ, ದೊಮ್ಮಲೂರು, ಬೆಂಗಳೂರು – 560 071**

**ಪತ್ರಿಕಾ ಪ್ರಕಟಣೆ**

## ಬೇಸಿಕ್ ಪರ್ವತಾರೋಹಣ ತರಬೇತಿ

ಬೆಂಗಳೂರು, ಆಗಸ್ಟ್ 28 ( ಕರ್ನಾಟಕ ವಾರ್ತೆ ) :

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ವತಿಯಿಂದ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಜನರಿಗೆ ಸೆಪ್ಟೆಂಬರ್ 2019 ರ ಮಾಹೆಯ ಕೊನೆಯ ವಾರದಲ್ಲಿ 28 ದಿನಗಳ ಬೇಸಿಕ್ ಪರ್ವತಾರೋಹಣ ತರಬೇತಿಯನ್ನು ಹಿಮಾಲಯದ ಪ್ರತಿಷ್ಠಿತ ತರಬೇತಿ ಶಾಲೆಯಲ್ಲಿ ನೀಡಲಾಗುತ್ತಿದೆ.

ಇದಕ್ಕೆ ಪೂರ್ವಭಾವಿಯಾಗಿ ದೈಹಿಕ ಪರೀಕ್ಷೆಯನ್ನು ಶ್ರೀ ಕಂಠೀರವ ಕ್ರೀಡಾಂಗಣ, ಬೆಂಗಳೂರು ಇಲ್ಲಿ ಸೆಪ್ಟೆಂಬರ್ 3 ರಂದು ಬೆಳಿಗ್ಗೆ 7.00 ಗಂಟೆಗೆ ನಡೆಸಲಾಗುವುದು. ಅರ್ಜಿಗಳನ್ನು ಅಕಾಡೆಮಿಯ ವೆಬ್‌ಸೈಟ್ **www.gethnaa.com** ನಲ್ಲಿ ಪಡೆಯಬಹುದು ಅಥವಾ ದೈಹಿಕ ಪರೀಕ್ಷೆಗೆ ಹಾಜರಾಗುವ ವೇಳೆಯಲ್ಲಿ ಜಾತಿ ಪ್ರಮಾಣ ಪತ್ರ ಮತ್ತು ಒಂದು ಭಾವಚಿತ್ರದೊಂದಿಗೆ ಮೇಲೆ ತಿಳಿಸಿದ ದಿನಾಂಕದಂದು ಹಾಜರಾಗುವುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 080–22210454 ಗೆ ಅಥವಾ 9448038220 ಗೆ ಮೂಲಕ ಸಂಪರ್ಕಿಸಬಹುದಾಗಿದೆ.

## ಗಣೇಶ ಹಬ್ಬ : ಅಗ್ನಿ ದುರಂತ ತಪ್ಪಿಸಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮ

ಬೆಂಗಳೂರು, ಆಗಸ್ಟ್ 28 ( ಕರ್ನಾಟಕ ವಾರ್ತೆ )

ಸೆಪ್ಟೆಂಬರ್ 2 ರಿಂದ ಜರುಗಲಿರುವ "ಗಣೇಶ ಚತುರ್ಥಿ" ಹಬ್ಬದ ಸಮಯದಲ್ಲಿ ಅಗ್ನಿ ಅಪಘಾತ ಹಾಗೂ ಇತರೆ ಅನಾಹುತಗಳನ್ನು ತಡೆಗಟ್ಟಲು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರವರಿಂದ ಈ ಕೆಳಕಂಡ ಸುರಕ್ಷತಾ ಕ್ರಮಗಳನ್ನು ಪಾಲಿಸಲು ಸಾರ್ವಜನಿಕರಲ್ಲಿ ಕೋರಿದ್ದಾರೆ.

* ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸುವ ಪೆಂಡಾಲ್‌ನ್ನು ಜಿಂಕ್ ಶೀಟ್ ಅಥವಾ ಇತರೆ ಅಗ್ನಿ ನಿರೋಧಕ ವಸ್ತುಗಳನ್ನು ಬಳಸಿ ನಿರ್ಮಿಸತಕ್ಕದ್ದು,

* ಪೆಂಡಾಲ್‌ಗಳನ್ನು ರಸ್ತೆಗಳಲ್ಲಿ ನಿರ್ಮಿಸುವುದನ್ನು ತಪ್ಪಿಸತಕ್ಕದ್ದು ಹಾಗೂ ತುರ್ತು ಪರಿಸ್ಥಿತಿ ಸಂದರ್ಭಗಳಲ್ಲಿ ಪೆಂಡಾಲ್‌ಗಳನ್ನು ತಲುಪಲು ಸೂಕ್ತ ರಸ್ತೆಗಳನ್ನು ವ್ಯವಸ್ಥಿಸತಕ್ಕದ್ದು.

* ಪ್ರತಿಯೊಂದು ಪೆಂಡಾಲ್‌ಗೆ ಮುಂದಿನಿಂದ ಹಾಗೂ ಹಿಂದಿನಿಂದ ಪ್ರವೇಶಿಸುವ ವ್ಯವಸ್ಥೆ ಇರಬೇಕು. ಇದರಿಂದ ಅಪಘಾತ ಸಂದರ್ಭದಲ್ಲಿ ಪರಿಸ್ಥಿತಿಗನುಗುಣವಾಗಿ ರಕ್ಷಣಾ ಕಾರ್ಯಕರ್ತರು ಪೆಂಡಾಲ್‌ಗೆ ಪ್ರವೇಶಿಸಿ ಒಳಗಿದ್ದವರನ್ನು ರಕ್ಷಿಸಬಹುದು.

* ವಿದ್ಯುತ್ ಸಂಪರ್ಕವನ್ನು ನುರಿತ ಕೆಲಸಗಾರರ ಮೂಲಕ ಕಲ್ಪಿಸತಕ್ಕದ್ದು ಹಾಗೂ ತೆರೆದ ವೈರ್‌ಗಳನ್ನು ಅಳವಡಿಸತಕ್ಕದ್ದಲ್ಲ. ಸಡಿಲವಾದ ವೈರ್‌ಗಳನ್ನು ವಾಹಕದೊಂದಿಗೆ ಸಂಪರ್ಕಿಸತಕ್ಕದ್ದು.

* ಪ್ರತಿಯೊಂದು ಪೆಂಡಾಲ್‌ನಲ್ಲಿ 5 ಕೆ.ಜಿ. ಸಾಮರ್ಥ್ಯದ ಎಬಿಸಿ ಅಗ್ನಿನಂದಕ, ಒಂದು 9 ಲೀಟರ್ ಸಾಮರ್ಥ್ಯದ ವಾಟರ್ ಪ್ರೆಜರ್ ಮಾದರಿ ಅಗ್ನಿನಂದಕ ಮತ್ತು 2 ಬಕೆಟುಗಳಲ್ಲಿ ಮರಳು ಹಾಗೂ ಎರಡು ಬಕೆಟುಗಳಲ್ಲಿ ನೀರನ್ನು ಇಟ್ಟಿರಬೇಕು.

* ಪ್ರತಿಯೊಂದು ಪೆಂಡಾಲ್ ಪಕ್ಕದಲ್ಲಿ ಎರಡು ಡ್ರಮ್‌ನಲ್ಲಿ ಕನಿಷ್ಠ 400 ಲೀಟರ್ ನೀರನ್ನು ಶೇಖರಿಸಿಟ್ಟಿರಬೇಕು.

* ಪೆಂಡಾಲ್ ನಲ್ಲಿ ಅಡುಗೆ ಅಥವಾ ಧೂಮಪಾನಕ್ಕೆ ಅವಕಾಶ ನೀಡಬಾರದು ಹಾಗೂ ಸಂಬಂಧಿತ ಸೂಚನಾ ಫಲಕವನ್ನು ಪೆಂಡಾಲ್ ನ ಹೊರಭಾಗದ ಎಲ್ಲ ದಿಕ್ಕುಗಳಲ್ಲಿ ಹಾಕಿರಬೇಕು.

* ಪೆಂಡಾಲ್‌ಗಳಲ್ಲಿ ಪಟಾಕಿಗಳನ್ನು ಶೇಖರಿಸಿಡಬಾರದು ಹಾಗೂ ಹತ್ತಿರದಲ್ಲಿ ಪಟಾಕಿಗಲನ್ನು ಸಿಡಿಸಲು ಅವಕಾಶ ಕಲ್ಪಿಸಬಾರದು ಹಾಗೂ ಪೆಂಡಾಲ್‌ಗಳಲ್ಲಿ ಯಾವುದೇ ರೀತಿಯ ಹೊತ್ತಿ ಉರಿಯುವ ಸಾಮಗ್ರಿಗಳನ್ನು ಶೇಖರಿಸಿಡಬಾರದು ಹಾಗೂ ಪೆಂಡಾಲ್‌ಗಳಲ್ಲಿ ರಾತ್ರಿ ಹೊತ್ತು ಯಾರೂ ಮಲಗಿಕೊಳ್ಳದೆ ಹಾಗೇ ನೋಡಿಕೊಳ್ಳುವುದು.

* ಪ್ರತಿ ಪೆಂಡಾಲ್‌ನಲ್ಲಿ ಅಗ್ನಿಶಾಮಕ ಇಲಾಖೆಯ ದೂರವಾಣಿ ಸಂಖ್ಯೆ 101 ಹಾಗು ಸ್ಥಳೀಯ ಪೊಲೀಸ್ ಕಂಟ್ರೋಲ್ ದೂರವಾಣ ಸಂಖ್ಯೆ 100 ನ್ನು ಸಾರ್ವಜನಿಕರಿಗೆ ಕಾಣುವಂತೆ ಪ್ರರ್ಶಿಸತಕ್ಕದ್ದು ಎಂದು ಉಪನಿರ್ದೇಶಕರು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಉಪನಿರ್ದೇಶಕರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## "Ganesha Chaturthi" - Public to take the following precautionary measures to avoid any unpleasant incidents:

Bengaluru, August 28th (Karnataka information)

During the ensuring "Ganesha Chaturthi" Festival from 02-09-2019 the DGP and DG of Karnataka Fire & Emergency Services department request the public to take the following precautionary measures so as to avoid any unpleasant incidents:

* During installation of Ganesh Idols fire resistance materials like Zinc Sheets etc. shall be used for the erection of pendals.

* Pendals should not be constructed on the roads and they should be easily accessible for the emergency vechicles.

* Access from front and rear of the pendals should be provided for any rescue operations.

* The electrification should be done by the authorised persons and all the loose wires should be properly insulated and should be connected with conduit.

* Minimum one water CO2 type extinguishers of 9 ltrs. capacity and 2 water and sand filled buckets should be provided in each pendal.

* Near each pendal minimum 400 ltrs. of water should be stroes in 2 barrels.

* Cooking and smoking shall be strictly prohibited in and around the pendals and "No Smoking" boards shall be displayed all sides of the pendals.

* Neither the crackers shall be stroed or burst in and around the pendals and should not stored any type of combustible materials in pendals and should not sleep in pendal during night time.

* In each pendal, the telephone numbers of Fire Control i.e., 101 and Police Control 100 should be displayed.

## ಗಣೇಶ ಹಬ್ಬಕ್ಕೆ ಬೆವಿಕಂ ನಿಂದ ಸೂಚನೆ

**ಬೆಂಗಳೂರು, ಆಗಸ್ಟ್ 28 ( ಕರ್ನಾಟಕ ವಾರ್ತೆ )**

ಪ್ರತಿ ವರ್ಷದಂತೆ ಈ ವರ್ಷವು ಸಹ ಗಣೇಶೋತ್ಸವದ ಆಚರಣೆಯ ಸಲುವಾಗಿ ಸಾರ್ವಜನಿಕರ ಸುರಕ್ಷತಾ ದೃಷ್ಟಿಯಿಂದ ಬೆವಿಕಂ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಸೂಚಿಸಲಾಗಿದೆ.

* ಆಯೋಜಕರು ಸಮಾರಂಭದ ಸ್ಥಳವು ಯಾವುದೇ ಮಾರ್ಗಗಳ ಅಡಿಯಲ್ಲಿ ಇರದಂತೆ ನೋಡಿಕೊಳ್ಳತಕ್ಕದ್ದು ಹಾಗೂ ಈ ಮಾರ್ಗಗಳಿಂದ ಸುರಕ್ಷತಾ ಅಂತರವನ್ನು ಬೆವಿಕಂ ಅಧಿಕಾರಿಗಳ ಮುಲಕ ಖಚಿತಪಡಿಸಿಕೊಳ್ಳುವುದು.

* ತಾತ್ಕಾಲಿಕ ವಿದ್ಯುತ್, ಸಂಪರ್ಕ ಬೇಕಾಗಿದ್ದಲ್ಲಿ, ಬಿಬಿಎಂಪಿ/ಸ್ಥಳೀಯ ಸಂಸ್ಥೆ, ಪೊಲೀಸ್ ಇಲಾಖೆ ಮತ್ತು ಅಗ್ನಿಶಾಮಕ ಇಲಾಖೆ ಗಳಿಂದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸತಕ್ಕದ್ದು.

* ಸಮಾರಂಭದಲ್ಲಿ 100 ಕ್ಕೂ ಹೆಚ್ಚಿನ ಜನಸಂಖ್ಯೆ ಸೇರುವ ಸಂದರ್ಭವಿದ್ದಲ್ಲಿ ಕಡ್ಡಾಯವಾಗಿ ವಿದ್ಯುತ್ ಪರಿವೀಕ್ಷಕರ ಅನುಮತಿ ಪಡೆಯತಕ್ಕದ್ದು.

* ವೈರಿಂಗ್ ಮತ್ತು ಇ.ಎಲ್.ಸಿ.ಬಿ ಅಳವಡಿಕೆಯ ಬಗ್ಗೆ ನೋಂದಯಿತ ವಿದ್ಯುತ್ ಗುತ್ತಿಗೆದಾರರಿಂದ ಸಮಾಪನಾ ವರದಿಯನ್ನು ಸಲ್ಲಿಸತಕ್ಕದ್ದು.

* ನಿಯಮಾನುಸಾರ ಅವಶ್ಯ ಶುಲ್ಕ ಪಾವತಿಸಿ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಬೆವಿಕಂ ನಿಂದ ಪಡೆಯುವುದು.

ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡಿರುವುದರ ಬಗ್ಗೆ ಮಾಹಿತಿ ದೊರೆತಲ್ಲಿ, ಸಂಬಂಧಪಟ್ಟವರ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು.

ಸಾರ್ವಜನಿಕರು ಈ ಎಲ್ಲಾ ಕ್ರಮಗಳನ್ನು ಪಾಲಿಸಿ, ಯಾವುದೇ ಅಹಿತಕರ ಘಟನೆಗಳಿಗೆ ಎಡೆಮಾಡಿಕೊಡದೆ, ಎಚ್ಚರವಹಿಸಿ ಸುರಕ್ಷತೆಯಿಂದ ಗಣೇಶೋತ್ಸವವನ್ನು ಆಚರಿಸಬೇಕಾಗಿ ಬೆವಿಕಂ ಮನವಿ ಮಾಡಿದೆ.

## "Ganesha Chaturthi" - Guidelines by Bescom

Bengaluru, August 28th (Karnataka information)

In view of public safety for the upcoming Gowri Ganesha Festival celebration, BESCOM has set the following guidelines to be followed by the public:

* Organizers shall ensure that the place of celebration is not beneath any EHT/HT/LT lines at the spot and to make sure throught BESCOM officers that there is sufficient clearance of lines as per norms.

* To submit the NoC from BBMP, Local authorities, Police Department, Fire Extinguisher department for availing temporary power supply connection.

* In case of public gathering of more than 100, it is mandatory to obtain permission from the Electrical Inspectorate.

* With regard to wiring and installation of ELCB, the completion report shall be submitted from the licensed electrical contractor.

*To pay necessary charges and avail temporary power supply from BESCOM as per the norms.

If any incidents of unauthorized power supply connections are noticed, legal action will be initiated.

The public are requested to follow the norms and celebrate the Ganesha Festival with utmost safety.

## "ವಿಜ್ಞಾನ ಪ್ರದರ್ಶನ" ಕಾರ್ಯಕ್ರಮ

**ಬೆಂಗಳೂರು, ಆಗಸ್ಟ್ 28 ( ಕರ್ನಾಟಕ ವಾರ್ತೆ )**

ಜವಾಹರ್‌ಲಾಲ್ ನೆಹರು ತಾರಾಲಯ ಹಾಗೂ ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ವತಿಯಿಂದ ಆಗಸ್ಟ್ 30 ರಂದು ಬೆಳಿಗ್ಗೆ 10.30 ಗಂಟೆಯಿಂದ "ವಿಜ್ಞಾನ ಪ್ರದರ್ಶನ" ಕಾರ್ಯಕ್ರಮವನ್ನು ಏಳನೇ ತರಗತಿ ಹಾಗೂ ಮೇಲ್ಪಟ್ಟ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದೆ.

ಈ ಪ್ರದರ್ಶನದಲ್ಲಿ ತಿರುಗುವ ಎಂಜಿನ್, ಕಾಂತೀಯ ಆವರ್ತಕಗಳಲ್ಲಿ ಚೈತನ್ಯದ ವರ್ಗಾವಣೆ, ದೃಷ್ಟಿಭ್ರಮೆಗಳು, ಸಂಯುಕ್ತ ಕಣ್ಣಿನ ಕಾರ್ಯವೈಖರಿ, ಶಿಲೆಗಳು ಮತ್ತು ಖನಿಜಗಳು ಹಾಗೂ ಗ್ರಾನುಲಾರ್ ವಸ್ತುಗಳ ಹರಿವು – ಇನ್ನೂ ಮುಂತಾದ ಮಾದರಿಗಳು ಪ್ರದರ್ಶನದಲ್ಲಿರುತ್ತದೆ. ಪ್ರದರ್ಶನದ ಪ್ರವೇಶ ಉಚಿತವಾಗಿದ್ದು, ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುವುದು.

ಮಧ್ಯಾಹ್ನ 12.30 ಮತ್ತು 2.30 ಗಂಟೆಗೆ ಆಕಾಶ ಮಂದಿರದ ಪ್ರದರ್ಶನಗಳಾದ 'ನಮ್ಮ ಸೌರವ್ಯೂಹ' ಹಾಗೂ ಮಧ್ಯಾಹ್ನ 3.30 ಮತ್ತು ಸಂಜೆ 4.30 ಗಂಟೆಗೆ "ನಕ್ಷತ್ರಗಳು" ಕಾರ್ಯಕ್ರಮ ಪ್ರದರ್ಶಿತಗೊಳ್ಳುತ್ತವೆ. ಪ್ರವೇಶ ದರ ವಯಸ್ಕರಿಗೆ ತಲಾ ರೂ 50/– ಹಾಗೂ ಶಾಲಾ ಮಕ್ಕಳಿಗೆ ತಲಾ ರೂ 30/– ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ 080–22379725/22266084 ಅಥವಾ info@taralaya,org ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜವಾಹರ್‌ಲಾಲ್ ನೆಹರು ತಾರಾಲಯದ ಪ್ರಕಟಣೆ ತಿಳಿಸಿದೆ.

# <u>ನೆರೆಪೀಡಿತ ಪ್ರದೇಶಗಳ ವಿದ್ಯಾರ್ಥಿಗಳು ಉಚಿತ ಶೈಕ್ಷಣಿಕ ದಾಖಲೆ</u>

**<u>ಬೆಂಗಳೂರು, ಆಗಸ್ಟ್ 28 ( ಕರ್ನಾಟಕ ವಾರ್ತೆ )</u>**

ನೆರೆಪೀಡಿತ ಪ್ರದೇಶಗಳಲ್ಲಿ ವಾಸವಾಗಿರುವ ವಿದ್ಯಾರ್ಥಿಗಳು ನೆರೆಹಾವಳಿಯಿಂದ ಶೈಕ್ಷಣಿಕ ದಾಖಲೆಗಳನ್ನು ಕಳೆದುಕೊಂಡ ಸಂದರ್ಭದಲ್ಲಿ ಅದಕ್ಕೆ ಪ್ರೌಢ ಶಿಕ್ಷಣ ಮಂಡಳಿಯಿಂದ ತಕ್ಷಣ ಸ್ಪಂದನೆ ದೊರೆಯಲಿದೆ. ದಾಖಲೆ/ಅಂಕಪಟ್ಟಿಗಳನ್ನು ಕೋರಿ ವಿದ್ಯಾರ್ಥಿಗಳು ಹಾಗೂ ಪೋಷಕರು ಅರ್ಜಿ ಸಲ್ಲಿಸಿದಲ್ಲಿ ಸಂಬಂಧಪಟ್ಟ ಶಾಲಾ ಆಡಳಿತ ಮಂಡಳಿ/ಮುಖ್ಯ ಶಿಕ್ಷಕರುಗಳು ಯಾವುದೇ ಶುಲ್ಕ ಪಡೆಯದೆ ಉಚಿತವಾಗಿ ಸಂಬಂಧಿಸಿದ ಪ್ರೌಢ ಶಾಲೆಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ವಿತರಿಸುವಂತೆ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗ ಇವರಿಗೆ ತುರ್ತು ಕ್ರಮ ವಹಿಸುವಂತೆ ಆದೇಶಿಸಲಾಗಿದೆ ಎಂದು ನಿರ್ದೇಶಕರು (ಪರೀಕ್ಷೆಗಳು) ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.